ಒಂದು ವರ್ಷ ಹಾಳಾಯಿತು. ಶಾಲೆಯ ಮುಖಾಂತರ ಕಳುಹಿಸಿದರೂ ಕೂಡ ಸರಿಯಾದ ಸಮಯಕ್ಕೆ ಅಂಕಪಟ್ಟಿ ಸಿಗಲಿಲ್ಲ. ಕೊನೆಗೆ ಬೆಂಗಳೂರಿಗೆ ಬಂದು ತೆಗೆದುಕೊಂಡು ಹೋಗಬೇಕಾಯಿತು. ಆದ್ದರಿಂದ ಶಾಖೆಗಳನ್ನು ತೆರೆದು ಬೆಳಗಾಂ ಮತ್ತು ಗುಲ್ಬರ್ಗಗಳಲ್ಲಿ ಸಿಗುವಂತೆ ವಿರ್ಪಾಟು ಮಾಡಿದರೆ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ.

ಶ್ರೀ ಎಸ್.ಎಂ. ಯಾಹ್ಯ : ಸರ್ಕಾರದ ವಿಚಾರದ ಪ್ರಕಾರ ಶಾಖೆಗಳನ್ನು ಮಾಡಿದರೆ ಇನ್ನೂ ಹೆಚ್ಚು ತಡವಾಗಬಹುದು. ಹೊಸ ಸಮಸ್ಯೆಗಳು ಆಗುವುದಕ್ಕೆ ಸಾಧ್ಯವಾಗುತ್ತದೆಂದು ಹೇಳಿ, ಈಗಿನ ಪದ್ಧತಿಯನ್ನು ಇನ್ನೂ ಒಳ್ಳೆಯ ರೂಪಕ್ಕೆ ತರಲಿಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ.

ಪಾಂಡವಪುರ ಜನರಲ್ ಆಸ್ಪತ್ರೆಗೆ ಸಿಬ್ಬಂದಿ ಮಂಜೂರಾತಿ

116 - ಶ್ರೀ ಡಿ. ಹಲಗೇಗೌಡ (ಪಾಂಡವಪುರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಾಂಡವಪುರ ಜನರಲ್ ಆಸ್ಪತ್ರೆಗೆ ಸಿಬ್ಬಂದಿ ಮತ್ತು ಸಲಕರಣೆಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಆಸ್ಪತ್ರೆಗೆ ಬೇಕಾಗುವ ಸಿಬ್ಬಂದಿಗಳನ್ನು ಸರ್ಕಾರವು ಮಂಜೂರು ಮಾಡಿದೆಯೇ

ಇ) ಮಂಜಾರಾತಿಯಾಗಿದ್ದರೆ ಎಷ್ಟು ಜನ ಸಿಬ್ಬಂದಿಯನ್ನು ಯಾವ ಯಾವ ಹುದ್ದೆಗಳಿಗೆ ನೇಮಿಸಿರುತ್ತದೆ?

ಈ) ಸಾರ್ವಜನಿಕರ ಹಿತದೃಷ್ಟಿಯಿಂದ ಕೊರತೆ ಇರುವ ಸಿಬ್ಬಂದಿ ವರ್ಗ ಮತ್ತು ಸಲಕರಣೆಗಳನ್ನು ಸರ್ಕಾರದವರು ಶೀಘ್ರವಾಗಿ ಒದಗಿಸುವರೇ?

ಡಾ॥ ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಸಿಬ್ಬಂದಿ ಕೊರತೆಯಿರುವುದು ಗಮನಕ್ಕೆ ಬಂದಿದೆ.

ಆ) ಕನಿಷ್ಠ ಅವಶ್ಯಕ ಸಲಕರಣಗಳನ್ನು ಒದಗಿಸಲಾಗಿದೆ. ಆದರೆ ಇನ್ನೂ ಹೆಚ್ಚಿನ ಸಲಕರಣೆಗಳನ್ನು ಒದಗಿಸಲು ಆಸ್ಪತ್ರೆಯಿಂದ ಕೋರಿಕೆ ಬಂದಿದೆ.

ಇ) ಹೌದು.

ಈ) ಮಂಜಾರಾಗಿರುವ ಹುದ್ದೆಗಳ ಸಂಖ್ಯೆ -66 ಮತ್ತು ಅವುಗಳಲ್ಲಿ 49 ಹುದ್ದೆಗಳನ್ನು ತುಂಬಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಈ) ಖಾಲಿ ಇರುವ ಹುದ್ದೆಗಳನ್ನು ತುಂಬಲಾಗುವುದು. ಕೋರಿರುವ ಹೆಚ್ಚಿನ ವೈದ್ಯಕೀಯ ಸಲಕರಣೆಗಳನ್ನು ಒದಗಿಸಲು ಜಿಲ್ಲಾ ಪರಿಷತ್ತನ್ನು ಕೋರಲಾಗುವುದು.

ಅನುಬಂಧ

ಸಾರ್ವಜನಿಕ ಆಸ್ಪತ್ರೆ ಪಾಂಡವಪುರ ಇಲ್ಲಿಗೆ ಮಂಜೂರಾದ ಹುದ್ದೆಗಳು ಹಾಗೂ ಖಾಲಿ ಹುದ್ದೆಗಳ ವಿವರ

	ಹುದ್ದೆಗಳ ವಿವರ	ಮಂಜೂರಾದ ಹುದ್ದೆ	ಕಾರ್ಯನಿರ್ವಹಿಸುತ್ತಿರುವ ಹುದ್ದೆ	ಖಾಲಿ ಇರುವ ಹುದ್ದೆ
1)	ಕಛೇರಿ ಅಧೀಕ್ಷಕರು	1	1	_
2)	ಪ್ರ.ದ. ಸಹಾಯಕರು	3	2	1
3)	ದ್ವಿ.ದ. ಸಹಾಯಕರು	2	2	ವರ್ಗಾವಣೆಯಿಂದ ತೆರವಾಗಿದೆ

4)	ಕಿರಿಯ ಆರೋಗ್ಯ ಸಹಾಯಕರು(ಪು)	2	1	1
5)	ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರು	2	2	_
6)	ಹಿರಿಯ ಫಾರ್ಮಾಸಿಸ್ಟ್	1	1	_
7)	ಕಿರಿಯ ಫಾರ್ಮಾಸಿಸ್ಟ್	2	2	_
8)	ಕ್ಷೇತ್ರ ಆರೋಗ್ಯ ಶಿಕ್ಷಕರು	1	1	_
9)	ಕಿರಿಯ ವೈದ್ಯೇತರ ಮೇಲ್ವಿಚಾರಕರು	1	1	_
10)	ಶುಶ್ರೂಷಕರು	6	4	2
11)	ನೇತ್ರ ಸಹಾಯಕರು	1	1	_
12)	ಹಿರಿಯ ಪ್ರಯೋಗಶಾಲಾ ತಂತ್ರಜ್ಞ	1	_	1
13)	ಫ್ಯಾರಾ ಮೆಡಿಕಲ್ ವರ್ಕರ್	1	1	_
14)	ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರು	12	11	1
15)	ಕಿರಿಯ ಪುರುಷ ಆರೋಗ್ಯ ಸಹಾಯಕರು	7	6	1
16)	ವಾಹನ ಚಾಲಕರು	1	1	_
17)	ಸಾಮಾನ್ಯ ವೈದ್ಯಾಧಿಕಾರಿ	3	2	1
18)	ಮಹಿಳಾ ವೈದ್ಯಾಧಿಕಾರಿ	1	1	_
19)	ಉಪಶಸ್ತ್ರ ಚಿಕಿತ್ಸಕರು	1	1	_
20)	ದಂತ ಚಿಕಿತ್ಸಕರು	1	_	1
21)	ಕ್ಷ-ಕಿರಣ ತಂತ್ರಜ್ಞ	1	1	_
22)	ಕ್ಷ-ಕಿರಣ ಸಹಾಯಕ	1	_	1
23)	ಕಿರಿಯ ಪ್ರಯೋಗ ಶಾಲಾ ತಂತ್ರಜ್ಞ	1	1	_
24)	ಪ್ರಯೋಗ ಶಾಲಾ ಸಹಾಯಕ	1	_	1
25)	ಗ್ರೂಪ್-ಡಿ	8	5	3
26)	ಅಡಿಗೆಯವರು	2	_	2
27)	ಬೆರಳಚ್ಚುಗಾರರು ಹಾಗೂ ಸಹಾಯಕರು	1	1	_
28)	ಶುಶ್ರೂಷಕ ಅಧೀಕ್ಷಕರು	1	_	1
	ಒಟ್ಟು	66	49	17

ಶ್ರೀ ಡಿ. ಹಲಗೇಗೌಡ : ಮಾನ್ಯ ಅಧ್ಯಕ್ಷರೆ, ಪಾಂಡವಪುರ ಜನರಲ್ ಆಸ್ಪತ್ರೆಯಲ್ಲಿರುವ ಸಿಬ್ಬಂದಿ ಕೊರತೆ - ಬಗ್ಗೆ ಕೇಳಿರುವ ಮಂಜೂರಾಗಿರತಕ್ಕ 66 ಹುದ್ದೆಗಳ ಪೈಕಿ 17 ಖಾಲಿ ಇವೆ, ಅವುಗಳನ್ನು ಇನ್ನು ತುಂಬಿಲ್ಲವೆನ್ನುವ ಉತ್ತರವಿದೆ. ಬಹುಶಃ ಇದು ಸಮಾಧಾನಕರ ಉತ್ತರವಲ್ಲ, ಸರಿಯಾದ ಉತ್ತರವಲ್ಲವೆಂದು ನನಗಾದರೂ ಕೂಡ ನನಗನಿಸುತ್ತದೆ. ಏಕೆಂದರೆ, ಇಲ್ಲಿ ಸಿಬ್ಬಂದಿ ನೇಮಕ ಮಾಡಿರತಕ್ಕದ್ದು ದಿನಗೂಲಿ ಆಧಾರದ ಮೇಲೆ ನೇಮಕ ಮಾಡಿದ್ದಾರೆ. ದಿವಸಕ್ಕೆ 5 ರೂಪಾಯಿ ಅಂದರೆ ತಿಂಗಳಿಗೆ 150 ರೂಪಾಯಿಗಳಿಗೆ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಇನ್ನು ಕೂಡ ಸಂಬಳ ಕೊಟ್ಟಿಲ್ಲ. ಅಂತಹದ್ದು ಲೆಕ್ಕಹಾಕಿಕೊಂಡು ಕೇವಲ 17 ಹುದ್ದೆಗಳು ಖಾಲಿಯಿವೆಯೆಂದು ಹೇಳುತ್ತಿದ್ದಾರೆ. ನಾನು ಅಲ್ಲಿಗೆ ಭೇಟಿ ಕೊಟ್ಟಾಗ ಸಿಬ್ಬಂಧಿಯ ಕೊರತೆಯಿದೆ. ಬಹುತೇಕ ಸಿಬ್ಬಂದಿ ಕೊರೆತೆಯಿರುವುದರಿಂದ ಆಸ್ಪತ್ರೆಯ ಶುಚಿತ್ವವಾಗಲೀ, ಒಳ್ಳೆಯ ವಾತಾವರಣವಾಗಲಿ ಅಲ್ಲಿ ಕಾಣುತ್ತಿಲ್ಲ. ದಯಮಾಡಿ ಖಾಲಿಯಿರುವ ಹುದ್ದೆಗಳನ್ನು ಭರ್ತಿಮಾಡಿ ಅಲ್ಲಿಗೆ ಬೇಕಾಗಿರತಕ್ಕ ಸಲಕರಣೆಗಳನ್ನು ಕೂಡಲೇ ನೀಡುವುದರ ಮುಖಾಂತರ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕು. ಅಲ್ಲಿಗೆ ಬೇಕಾಗದೇ ಇರತಕ್ಕ ದಂತ ವೈದ್ಯರನ್ನು ಹಾಕಿದ್ದಾರೆ. ದಂತವೈದ್ಯರಿಗೆ ಬೇಕಾದ ಸಲಕರಣೆಗಳು ಅಲ್ಲಿ ಇಲ್ಲ. ಅದರ ಬದಲು

ಮಕ್ಕಳ ತಜ್ಞರು, ಗೈನಕಾಲಜಿಸ್ಟ್ ಅಂತಹವರನ್ನು ಹಾಕಿದರೆ ಜನರಿಗೆ ತುಂಬಾ ಅನುಕೂಲವಾಗುತ್ತದೆ. ಏನೂ ಪ್ರಯೋಜನ ಇಲ್ಲದೆ ಇರತಕ್ಕ ವೈದ್ಯರುಗಳನ್ನು ಹಾಕಿ ಆಸ್ಪತ್ರೆಯಲ್ಲಿ ಲೆಕ್ಕಕ್ಕೆ ಮಾತ್ರ ಇಡುವುದರ ಬದಲು ಸೇವೆಯನ್ನು ಕೊಡತಕ್ಕ ಕಾರ್ಯವನ್ನು ಮಾಡುತ್ತಾರೆಯೇ ಎಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳುತ್ತೇನೆ.

ಡಾ॥ ಎ.ಬಿ. ಮಲಕರೆಡ್ಡಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಂತೆ ಕೇವಲ ಪಾಂಡವಪುರ ಸಾರ್ವಜನಿಕ ಆಸ್ಪತ್ರೆ ಅಷ್ಟೇ ಅಲ್ಲ, ರಾಜ್ಯದ ಅನೇಕ ಆಸ್ಪತ್ರೆಗಳಲ್ಲಿ ಸಿಬ್ಬಂದಿಯ ಸ್ವಲ್ಪ ಕೊರತೆಯಿದೆ. ಅದಕ್ಕೆ ಕಾರಣ ಇಷ್ಟೆ, 1987ನೇ ಇಸವಿಯಿಂದ ಇಲ್ಲಿಯವರೆಗೆ ಹೊಸ ನೇಮಕಾತಿಗೆ ಬ್ಯಾನ್ ಇತ್ತು. ಸರ್ಕಾರ ನೇಮಕಾತಿಯನ್ನು ನಿಷೇಧಿಸಿತ್ತು. ನಮ್ಮ ಸರ್ಕಾರ ಬಂದಮೇಲೆ ಸುಮಾರು 1800 ಹೊಸ ಡಾಕ್ಟರುಗಳನ್ನು ಅಪಾಯಿಂಟ್‌ಮೆಂಟ್ ಮಾಡಿದ್ದೇವೆ. ಅದು 1987ರಿಂದ ಈಚೆಗೆ. ಆಮೇಲೆ ಪ್ಯಾರಾಮೆಡಿಕಲ್ ಸಿಬ್ಬಂದಿಗೆ ಸ್ವಲ್ಪ ತೊಂದರೆಯಿದೆ. ಸದ್ಯ ಹಣಕಾಸು ಇಲಾಖೆಯಿಂದ ಕ್ಲಿಯರೆನ್ಸ್ ಬಂದಿದೆ. ಸುಮಾರು 5 ಸಾವಿರ ಹುದ್ದೆಗಳನ್ನು ಭರ್ತಿ ಮಾಡುತ್ತಿದ್ದೇವೆ. ಆದರೆ ಹುದ್ದೆಗಳನ್ನು ಭರ್ತಿ ಮಾಡುವ ಹಂತದಲ್ಲಿ ಸುಪ್ರೀಂ ಕೋರ್ಟ್‌ನಿಂದ ತಡೆಯಾಜ್ಞೆ ಬಂದಿದೆ. ಆದರೂ ಕೂಡ ಮಾನ್ಯ ಸದಸ್ಯರು ಹೇಳುವಂತೆ 66 ಹುದ್ದೆಗಳಲ್ಲಿ ಕೇವಲ 17 ಹುದ್ದೆಗಳು ಅಲ್ಲಿ ಖಾಲಿಯಿವೆ. ಅಲ್ಲಿ ಕೆಲಸ ನಡೆಯುತ್ತಿಲ್ಲ. ಗುಣಮಟ್ಟ ಸರಿಯಿಲ್ಲವೆಂದು ಹೇಳಿದರೆ ಅದನ್ನು ಒಪ್ಪಲಿಕ್ಕೆ ನಾನು ತಯಾರಾಗಿಲ್ಲ. ಸಾಮಾನ್ಯ ವೈದ್ಯರ ಒಂದೇ ಒಂದು ಹುದ್ದೆ ಖಾಲಿಯಿದೆ. ಶುಶ್ರೂಷಕರ ಎರಡು ಹುದ್ದೆಗಳು ಖಾಲಿ ಇವೆ. ಪ್ಯಾರಾಮೆಡಿಕಲ್ ಸಿಬ್ಬಂದಿ ವಿವಿಧ ಹಂತಗಳಲ್ಲಿ ಒಂದೊಂದು ಖಾಲಿ ಇವೆ. ಕೆಲಸ ಚೆನ್ನಾಗಿ ನಡೆದಿದೆ. ಆಸ್ಪತ್ರೆಗಳಲ್ಲಿ ಸಲಕರಣೆಗಳನ್ನು ಒದಗಿಸಬೇಕಾದದ್ದು ನಮ್ಮ ಕರ್ತವ್ಯವಲ್ಲ ಅದು ಜಿಲ್ಲಾ ಪಂಚಾಯಿತಿಗೆ ಬರುತ್ತದೆ. ಸದಸ್ಯರ ಜೊತೆಗೆ ಸರ್ಕಾರ ಕೂಡ ಮಾಹಿತಿಯನ್ನು ಕೊಟ್ಟು ಶೀಘ್ರವಾಗಿ ಸಲಕರಣೆಗಳನ್ನು ಒದಗಿಸಿ ಕೊಡಲು ಸರ್ಕಾರ ಅವರ ಜೊತೆಯಲ್ಲಿ ಪ್ರಯತ್ನ ಮಾಡುತ್ತದೆ.

ಮಂಡ್ಯ ತಾಲ್ಲೂಕಿನಲ್ಲಿರುವ ಸಹಾಯಕ ಶಿಕ್ಷಣಾಧಿಕಾರಿಯ ಏಂಗಡಣೆ

504 - ಶ್ರೀ ಎನ್. ತಮ್ಮಣ್ಣ (ಕೆರೆಗೋಡು) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ತಾಲ್ಲೂಕಿನಲ್ಲಿರುವ ಸಹಾಯಕ ಶಿಕ್ಷಣಾಧಿಕಾರಿಗಳ ಹುದ್ದೆಯನ್ನು ಏಂಗಡಣೆ ಮಾಡುವ ವಿಚಾರ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ ಈ ಹುದ್ದೆಗಳನ್ನು ಯಾವಾಗ ಏಂಗಡಣೆ ಮಾಡುತ್ತೀರಿ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಸರ್ಕಾರದ ಮಟ್ಟದಲ್ಲಿ ಈ ಪ್ರಸ್ತಾವನೆಯನ್ನು ತಿರಸ್ಕರಿಸಿದೆ.

ಆ) ಉದ್ಭವಿಸುವುದಿಲ್ಲ.

ಶ್ರೀ ಎನ್. ತಮ್ಮಣ್ಣ : ಮಾನ್ಯ ಅಧ್ಯಕ್ಷರೆ, ಸರ್ಕಾರದ ಮಟ್ಟದಲ್ಲಿ ಈ ಪ್ರಸ್ತಾವನೆಯನ್ನು ತಿರಸ್ಕರಿಸಲಾಗಿದೆಯೆಂದು ಹೇಳಿದ್ದಾರೆ ಯಾವ ಕಾರಣದಿಂದ ತಿರಸ್ಕರಿಸಲಾಗಿದೆ ಎಂಬುದನ್ನು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳುತ್ತೇನೆ.

ಶ್ರೀ ಎಸ್.ಎಂ. ಯಾಹ್ಯ : ಮಾನ್ಯ ಅಧ್ಯಕ್ಷರೆ, ಪ್ರತಿಯೊಂದು ತಾಲ್ಲೂಕಿನಲ್ಲಿ ಒಬ್ಬರು ಎಇಒ ಇರುವುದು ಇವತ್ತಿನ ಪದ್ಧತಿಯಲ್ಲಿರುವ ಒಂದು ವ್ಯವಸ್ಥೆ. ಅದಕ್ಕೆ ಇನ್ನು ಹೆಚ್ಚು ರೇಂಜಸ್ ಮಾಡಬೇಕಾದರೆ ಅದು ನೀಡ್ ಇದ್ದರೆ ಮಾತ್ರ